
# ಸರ್ಕಾರಿ ಕಾಲೇಜುಗಳಲ್ಲಿ ನೀಟ್–ಸಿಇಟಿ ತರಬೇತಿ ವಿದ್ಯಾರ್ಥಿಗಳನ್ನು ಸೆಳೆಯಲು ಆಗಲಿ ಮಂತ್ರದಂಡ

**ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗಳು ಸೃಷ್ಟಿಸುತ್ತಿರುವ ಒತ್ತಡ ದಿನೇ ದಿನೇ ಹೆಚ್ಚುತ್ತಲೇ ಇದೆ. ಈ ಬಗೆಯ ಪರೀಕ್ಷೆಗಳು ಕಾಲೇಜುಗಳ ಅಸ್ತಿತ್ವವನ್ನೇ ಟೊಳ್ಳಾಗಿಸುತ್ತಿವೆ. ಇವು ಬರೀ ಸರ್ಟಿಫಿಕೇಟ್‌ಗಾಗಿ ಎಂಬಂತಾಗಿವೆ.**



ಈಶ್ವರ್

ಎಂಜಿನಿಯರಿಂಗ್, ವೈದ್ಯಕೀಯದಂತಹ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕವು ಸಿ.ಇ.ಟಿ. ಮೂಲಕ ಪ್ರವೇಶ ಪ್ರಕ್ರಿಯೆಯನ್ನು ಶುರು ಮಾಡಿದ ಮೇಲೆ ಪೋಷಕರ ಮನಃಸ್ಥಿತಿ ದೊಡ್ಡ ಮಟ್ಟದ ಬದಲಾವಣೆಗೆ ಒಳಗಾಯಿತು. ಈ ಸಾಮಾನ್ಯ ಪ್ರವೇಶ ಪರೀಕ್ಷೆಯ ಪ್ರಾಮುಖ್ಯ ಹೊಸ ಎತ್ತರಗಳನ್ನು ಕಂಡುಕೊಳ್ಳುತ್ತಲೇ ಖಾಸಗಿ ಕೋಚಿಂಗ್ ಕೇಂದ್ರಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡು ತಮ್ಮದೇ ಪರ್ಯಾಯ ಅರ್ಥವ್ಯವಸ್ಥೆಯನ್ನೇ ನಿರ್ಮಿಸಿಕೊಳ್ಳುವಷ್ಟು ಶಕ್ತಿಶಾಲಿಯಾದವು.

ಪರೀಕ್ಷಾ ಕೇಂದ್ರಿತವಾದ ವ್ಯಾಪಾರಿ ಶಿಕ್ಷಣವು ಹೊಸ ರೆಕ್ಕೆ ಪಡೆಯಲು ಇದು ಅನುವು ಮಾಡಿಕೊಟ್ಟಿತು. ಇದರ ಸಾಮಾಜಿಕ ಪರಿಣಾಮಗಳು ಬೇರೆ ಬೇರೆ ನೆಲೆಯಲ್ಲಿ ದೊಡ್ಡ ಮಟ್ಟದಲ್ಲಿ ಆಗಿವೆ ಎಂದು ಶಿಕ್ಷಣ ತಜ್ಞರು ಗುರುತಿಸಿದ್ದಾರೆ. ಮಾನವಿಕಗಳು ಮೂಲೆಗೆ ಸರಿಯಲು ಕಾರಣವಾದ ಪ್ರಮುಖ ಅಂಶಗಳಲ್ಲಿ ಇದು ಕೂಡ ಒಂದು ಎಂದು ಹೇಳಲಾಗುತ್ತಿದೆ. ಈ ಬಗೆಯ ಪರಿಣಾಮಗಳು ಏನೇ ಇರಲಿ, ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಕಾಲೇಜು ಪಾಠದ ಜೊತೆಗೆ ಪ್ರತ್ಯೇಕವಾದ ಕೋಚಿಂಗ್ ಅನಿವಾರ್ಯ ಎಂಬ ಭ್ರಮೆಯನ್ನು ಸಾರ್ವತ್ರಿಕಗೊಳಿಸುವಲ್ಲಿ ಇದರ ಕೊಡುಗೆ ದೊಡ್ಡದು.

ಇದು ಹೀಗಿರಬೇಕಾದರೆ, ‘ಒಂದು ದೇಶ – ಒಂದು ಪರೀಕ್ಷೆ’ ಹೆಸರಿನಲ್ಲಿ ‘ನೀಟ್’ ವ್ಯವಸ್ಥೆ ರೂಪುಗೊಂಡಿತು. ಇದು ಜಾರಿಯಾದ ಬಳಿಕ ಸಿ.ಇ.ಟಿ. ಪರಿಧಿಯಿಂದ ವೈದ್ಯಕೀಯ ಪ್ರವೇಶಾತಿ ಕಳಚಿಕೊಂಡಿತು. ನೀಟ್ ಕಾರಣದಿಂದಾಗಿ ವಿದ್ಯಾರ್ಥಿಗಳ ಹೆಗಲಿಗೆ ಪ್ರವೇಶಾತಿಗಾಗಿ ಹೆಚ್ಚುವರಿಯಾಗಿ ಮತ್ತೊಂದು ಪರೀಕ್ಷೆಯ ಹೊರೆ ಏರಿತು. ಈ ಎರಡೂ ಪರೀಕ್ಷೆಗಳು ಈ ವರ್ಷ ವಿಪರೀತ ಎನಿಸುವಷ್ಟು ಚರ್ಚೆಗೆ ಒಳಗಾಗಿವೆ. ಆದರೆ, ಒಳ್ಳೆಯ ಕಾರಣಕ್ಕಾಗಿ ಅಲ್ಲ; ನಕಾರಾತ್ಮಕ ನೆಲೆಯಲ್ಲಿ ಎಂಬುದು ದುರದೃಷ್ಟದ ಸಂಗತಿ. ಪಠ್ಯಕ್ರಮಕ್ಕೆ ಹೊರತಾದ ಪ್ರಶ್ನೆಗಳ ಕಾರಣದಿಂದಾಗಿ ಉಂಟಾದ ಗೊಂದಲದಿಂದ ಸಿ.ಇ.ಟಿ. ಸುದ್ದಿಯಾಯಿತು. ಪ್ರಶ್ನೆಪತ್ರಿಕೆ ಸೋರಿಕೆ ಸೇರಿದಂತೆ ಬೇರೆ ಬೇರೆ ಬಗೆಯ ಅಕ್ರಮಗಳ ಕಾರಣದಿಂದಾಗಿ ನೀಟ್, ದೇಶವ್ಯಾಪಿ ಟೀಕೆಗೆ ಒಳಗಾಯಿತು. ಇದರೊಂದಿಗೆ ಕೋಚಿಂಗ್ ಕೇಂದ್ರಗಳ ಹಾವಳಿ ಕುರಿತ ವಿಶ್ಲೇಷಣೆಗಳೂ ಗಮನಸೆಳೆದವು.

ರಾಜ್ಯ ಸರ್ಕಾರದ ಒಂದು ಉಪಕ್ರಮ ಈ ಪ್ರವೇಶ ಪರೀಕ್ಷೆಗಳನ್ನು ನೆನೆಯಲು ಪ್ರೇರಣೆ ಒದಗಿಸಿತು. ಸರ್ಕಾರಿ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಟ್–ಸಿ.ಇ.ಟಿ. ತರಬೇತಿ ನೀಡುವ ಕಾರ್ಯಕ್ರಮವನ್ನು ನಮ್ಮ ಶಿಕ್ಷಣ ಇಲಾಖೆ ಹಮ್ಮಿಕೊಂಡಿದೆ. ಈ ವರ್ಷದಿಂದಲೇ ಅದು ಜಾರಿಗೂ ಬರುತ್ತಿದೆ. ಒಟ್ಟು 25 ಸಾವಿರ ವಿದ್ಯಾರ್ಥಿಗಳಿಗೆ ಉಚಿತವಾಗಿ ತರಬೇತಿ ನೀಡಲು ಇಲಾಖೆ ಮುಂದಾಗಿದೆ. ಇದಕ್ಕಾಗಿ ₹ 12 ಕೋಟಿ ಬಿಡುಗಡೆ ಮಾಡಲು ಸರ್ಕಾರ ಸಮ್ಮತಿಸಿದೆ ಎಂದು ವರದಿಯಾಗಿದೆ.

ಬರೀ 25 ಸಾವಿರ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದರೆ, ಉಳಿದ ಆಕಾಂಕ್ಷಿಗಳ ಪಾಡೇನು ಎಂಬ ಪ್ರಶ್ನೆ ಇಲ್ಲಿ ಸಹಜವಾಗಿಯೇ ಉದ್ಭವಿಸಲಿದೆ. ಇದು, ಆರಂಭಿಕ ಹೆಜ್ಜೆ. ವಿಸ್ತರಣೆಗೆ ಅವಕಾಶ ಇದ್ದೇ ಇದೆ. ಮುಂದಿನ ದಿನಗಳಲ್ಲಿ ಅದು ಕೂಡ ಸಾಧ್ಯವಾಗಬಹುದು. ಈ ನೆಲೆಯಲ್ಲಿ ಸರ್ಕಾರದ ನಡೆ ಸ್ವಾಗತಾರ್ಹ. ‘ವಿದ್ಯಾರ್ಥಿಗಳನ್ನು ನೀಟ್–ಸಿ.ಇ.ಟಿಗೆ ಸಜ್ಜುಗೊಳಿಸುತ್ತೇವೆ’ ಎಂಬುದು ಕೆಲವು ಖಾಸಗಿ ಕಾಲೇಜುಗಳ ಪಾಲಿಗೆ ಟ್ರಂಪ್ ಕಾರ್ಡ್ ಆಗಿದೆ. ಶುಲ್ಕ ಭರಿಸುವ ಸಾಮರ್ಥ್ಯ ಇಲ್ಲದಿದ್ದರೂ ಈ ಕಾರಣಕ್ಕಾಗಿಯೇ ಕೆಲವರು ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆಯುತ್ತಿದ್ದಾರೆ. ಅಂತಹುದೇ ಸೌಲಭ್ಯ ಸರ್ಕಾರಿ ಕಾಲೇಜುಗಳಲ್ಲೂ ದೊರೆಯುತ್ತದೆ ಎಂದಾದರೆ, ಕಾಲೇಜುಗಳ ವಿಚಾರದಲ್ಲಿ ಅವರ ಆಯ್ಕೆ ಬದಲಾಗುವ ಸಾಧ್ಯತೆ ಇದೆ. ಅಲ್ಲದೆ, ಕೋಚಿಂಗ್ ಕೇಂದ್ರಗಳಿಗೆ ಎಡತಾಕುವ ಅನಿವಾರ್ಯವನ್ನು ನಿವಾರಿಸುತ್ತದೆ.

ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗಳು ಸೃಷ್ಟಿಸುತ್ತಿರುವ ಒತ್ತಡ ದಿನೇ ದಿನೇ ಹೆಚ್ಚುತ್ತಲೇ ಇದೆ. ಈ ಬಗೆಯ ಪರೀಕ್ಷೆಗಳು ಕಾಲೇಜುಗಳ ಅಸ್ತಿತ್ವವನ್ನೇ ಟೊಳ್ಳಾಗಿಸುತ್ತಿವೆ. ಇವು ಬರೀ ಸರ್ಟಿಫಿಕೇಟ್‌ಗಾಗಿ ಎಂಬಂತಾಗಿವೆ. ಅಂಕ ಗಳಿಕೆಯ ಗುರಿ ಮುಟ್ಟಲು ಬೇರೊಂದು ವ್ಯವಸ್ಥೆ ಇದೆ, ಅದೇ ಹೆಚ್ಚು ಶಕ್ತಿಯುತ ಎಂಬ ನಂಬಿಕೆಯನ್ನು ಬಲಪಡಿಸುತ್ತಿವೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ಕೋಚಿಂಗ್ ಅಥವಾ ಟ್ಯೂಷನ್ ವ್ಯವಸ್ಥೆಯನ್ನು ನಿರಾಕರಿಸಲಾಗದಂತಹ ಹಂತ ತಲುಪಿದ್ದೇವೆ. ಅದನ್ನು ಅಪ್ರಸ್ತುತಗೊಳಿಸುವುದು ನಮ್ಮ ಶಿಕ್ಷಣ ವ್ಯವಸ್ಥೆಯ ಆರೋಗ್ಯದ ದೃಷ್ಟಿಯಿಂದ ಅತ್ಯಗತ್ಯ. ಆ ದಿಸೆಯಲ್ಲಿ ಈಗಲಾದರೂ ಪ್ರಯತ್ನ ಶುರುವಾಗಬೇಕು. ಅದಕ್ಕಾಗಿ ವ್ಯವಸ್ಥೆ ಮೇಲೆ ಒತ್ತಡ ಹೇರುವಂತಹ ಗುಂಪುಗಳು ರೂಪುಗೊಳ್ಳಬೇಕು. ಈ ಕೆಲಸಕ್ಕೆ ಪ್ರಜ್ಞಾವಂತರೆಲ್ಲರೂ ಕೈಜೋಡಿಸಬೇಕಿದೆ.

■ ಎನ್‌. ಉದಯಕುಮಾರ್